**National**
**Kannada**
**25.01.2026 1310 hrs**

ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

<u>ಮುಖ್ಯಾಂಶಗಳು</u>

1. ಮತದಾನ ಪ್ರಜಾಪ್ರಭುತ್ವದ ಆತ್ಮ; ೧೮ ವರ್ಷದ ತುಂಬಿದ ಎಲ್ಲರೂ ಮತದಾರರಾಗಿ ನೋಂದಾಯಿಸಿಕೊಳ್ಳಬೇಕು: ಮನ್ ಕಿ ಬಾತ್ ಕಾರ್ಯಕ್ರಮದಲ್ಲಿ ಪ್ರಧಾನ ನರೇಂದ್ರ ಮೋದಿ ಕರೆ
2. ವಿಶ್ವದ ೩ನೇ ಅತಿದೊಡ್ಡ ನವೋದ್ಯಮ ಪರಿಸರವಾಗಿ ಭಾರತ ಬೆಳವಣಿಗೆ; ದೇಶದ ಆರ್ಥಿಕತೆ ತ್ವರಿತಗತಿಯಲ್ಲಿ ವೃದ್ಧಿ: ಮನದ ಮಾತು ಕಾರ್ಯಕ್ರಮದಲ್ಲಿ ಪ್ರಧಾನಿ ಉಲ್ಲೇಖ
3. ಮತದಾನ, ಚುನಾವಣಾ ಪ್ರಕ್ರಿಯೆಯಲ್ಲಿ ನಾಗರಿಕರ ನಂಬಿಕೆಯ ಪ್ರತಿಬಿಂಬ - ರಾಷ್ಟ್ರಪತಿ ದ್ರೌಪದಿ ಮುರ್ಮು
4. ೨೦೨೬ರ ಗಣರಾಜ್ಯೋತ್ಸವದ ಅಂಗವಾಗಿ ಪೊಲೀಸ್, ಅಗ್ನಿಶಾಮಕ, ಗೃಹರಕ್ಷಕ ಹಾಗೂ ಸುಧಾರಣಾ ಸೇವೆಗಳ ೯೮೨ ಸಿಬ್ಬಂದಿಗೆ ಶೌರ್ಯ ಮತ್ತು ಸೇವಾ ಪದಕ ಪ್ರದಾನ

<><><>

ಪ್ರಧಾನಿ ನರೇಂದ್ರ ಮೋದಿ ತಮ್ಮ ಮನದ ಮಾತು ಕಾರ್ಯಕ್ರಮ ಮನ್ ಕಿ ಬಾತ್‌ನ ೧೩೦ನೇ ಅವತರಣಿಕೆಯಲ್ಲಿ ದೇಶವಾಸಿಗಳನ್ನುದ್ದೇಶಿಸಿ ಮಾತನಾಡಿದ್ದಾರೆ. ಗಣರಾಜ್ಯೋತ್ಸವದ ಮುನ್ನಾದಿನವಾದ ಇಂದು ಪ್ರಧಾನಿ, ಜನವರಿ ೨೬ ಸಂವಿಧಾನ ಜಾರಿಗೆ ಬಂದ ಐತಿಹಾಸಿಕ ಕ್ಷಣವಾಗಿದೆ. ಇದು ಸಂವಿಧಾನ ನಿರ್ಮಾತೃಗಳಿಗೆ ಗೌರವ ಸಲ್ಲಿಸುವ ದಿನವೆಂದು ಎಂದು ಸ್ಮರಿಸಿದ್ದಾರೆ.

ಧ್ವನಿ: ಪ್ರಧಾನಿ ನರೇಂದ್ರ ಮೋದಿ ( ೧೬ ಸೆಕೆಂಡ್ಸ್) ಗಣರಾಜ್ಯೋತ್ಸವ

ಇಂದು ರಾಷ್ಟ್ರೀಯ ಮತದಾರರ ದಿನವಾಗಿದ್ದು, ಮತದಾನ ಪ್ರಜಾಪ್ರಭುತ್ವದ ಆತ್ಮವಾಗಿದೆ. ಮತದಾರರಾಗುವುದು ಜೀವನದ ಪ್ರಮುಖ ಮೈಲಿಗಲ್ಲು ಎಂದು ಬಣ್ಣಿಸಿದ್ದಾರೆ. ೧೮ ವರ್ಷ ತುಂಬಿದ ಪ್ರತಿಯೊಬ್ಬ ಯುವಕ-ಯುವತಿಯೂ ಮತದಾರರಾಗಿ ನೋಂದಾಯಿಸಿಕೊಳ್ಳಬೇಕು ಎಂದು ಅವರು ತಮ್ಮ ಮನ್ ಕಿ ಬಾತ್‌ನಲ್ಲಿ ಮನವಿ ಮಾಡಿದ್ದಾರೆ. ನಂತರ ೨೦೧೬ರಲ್ಲಿ ಆರಂಭವಾದ ಸ್ಟಾರ್ಟ್‌ಅಪ್ ಇಂಡಿಯಾ ಯೋಜನೆಯ ಮಹತ್ವಕಾಂಕ್ಷೆಯ ಪಯಣವನ್ನು ಮೆಲುಕು ಹಾಕಿದ ಪ್ರಧಾನಿ, ಈ ಯೋಜನೆ, ಇಂದು ಭಾರತವನ್ನು ವಿಶ್ವದ ಮೂರನೇ ಅತಿದೊಡ್ಡ ಸ್ಟಾರ್ಟ್‌ಅಪ್ ಪರಿಸರವಾಗಿ ರೂಪಿಸಿದೆ. ಕೃತಕ ಬುದ್ಧಿಮತ್ತೆ, ಬಾಹ್ಯಾಕಾಶ, ಹಸಿರು ಹೈಡ್ರೋಜನ್, ಜೈವಿಕ ತಂತ್ರಜ್ಞಾನ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಭಾರತೀಯ ನವೋದ್ಯಮಗಳು ಜಾಗತಿಕ ಮಟ್ಟದಲ್ಲಿ ಸಾಧನೆ ಮಾಡುತ್ತಿವೆ ಎಂದು ಶ್ಲಾಘಿಸಿದರು. ಭಾರತದ ಆರ್ಥಿಕತೆ ವೇಗವಾಗಿ ಮುಂದುವರಿಯುತ್ತಿದೆ.

ಪ್ರಪಂಚವೇ ಭಾರತದ ಮೇಲೆ ದೃಷ್ಟಿ ನೆಟ್ಟಿದೆ. ಇಂತಹ ಸಮಯದಲ್ಲಿ, ನಮ್ಮೆಲ್ಲರ ಮೇಲೆ ದೊಡ್ಡ ಜವಾಬ್ದಾರಿಯಿದೆ. ಅದೇ ಗುಣಮಟ್ಟಕ್ಕೆ ಪ್ರಾಶಸ್ತ್ಯ ನೀಡುವುದಾಗಿದೆ. ಭಾರತೀಯ ಉತ್ಪನ್ನಗಳು ಗುಣಮಟ್ಟದ ಪರ್ಯಾಯವಾಗಬೇಕು. ಜವಳಿ, ತಂತ್ರಜ್ಞಾನ, ಎಲೆಕ್ಟ್ರಾನಿಕ್ಸ್ ಅಥವಾ ಕೇವಲ ಪ್ಯಾಕೇಜಿಂಗೇ ಆಗಿರಲಿ ಭಾರತೀಯ ಉತ್ಪನ್ನವೆಂದರೆ ಉತ್ಕೃಷ್ಟ ಗುಣಮಟ್ಟ ಎನ್ನುವಂತಾಗಬೇಕು. "ಗುಣಮಟ್ಟ, ಗುಣಮಟ್ಟ ಮತ್ತು ಕೇವಲ ಗುಣಮಟ್ಟ"ವೇ ಭಾರತದ ಮಂತ್ರವಾಗಬೇಕು ಎಂದು ಪ್ರಧಾನಿ ಕರೆ ನೀಡಿದ್ದಾರೆ. ದೇಶದ ಜನರ ಆವಿಷ್ಕಾರಿಗಳನ್ನು ಬಣ್ಣಿಸಿರುವ ಪ್ರಧಾನಿ, ಸಮಸ್ಯೆಗಳಿಗೆ ಪರಿಹಾರಗಳನ್ನು ಹುಡುಕುವುದು ನಮ್ಮ ದೇಶವಾಸಿಗಳ ಸ್ವಭಾವದಲ್ಲೇ ಇದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಉತ್ತರ ಪ್ರದೇಶದ ಅಜಮ್ಗಢದಲ್ಲಿ ಇಂಥದ್ದೇ ಒಂದು ಪ್ರಯತ್ನ ಬೆಳಕಿಗೆ ಬಂದಿದೆ. ಈ ಪ್ರದೇಶದ ಮೂಲಕ ಹರಿಯುವ ತಮ್ಸಾ ನದಿಯಲ್ಲಿ ಹೂಳು, ಕಸ ಮತ್ತು ಕೊಳಕು ತುಂಬಿದರಿಂದ ಅದರ ಹರಿವನ್ನು ನಿರ್ಬಂಧಿಸಿತ್ತು. ಜನರು ಒಟ್ಟುಗೂಡಿ ನದಿಯನ್ನು ಸ್ವಚ್ಛಗೊಳಿಸಿ, ದಡದ ಉದ್ದಕ್ಕೂ ನೆರಳು ನೀಡುವ ಹಾಗೂ ಹಣ್ಣಿನ ಮರಗಳನ್ನು ನೆಟ್ಟಿದ್ದಾರೆ. ಸ್ಥಳೀಯ ಜನರು ತಮ್ಮ ಕರ್ತವ್ಯ ಪ್ರಜ್ಞೆಯೊಂದಿಗೆ ನದಿಯನ್ನು ಪುನರುಜ್ಜೀವನಗೊಳಿಸಿದ್ದಾರೆ. ಆಂಧ್ರಪ್ರದೇಶದ ಅನಂತಪುರದಲ್ಲಿ ಇದೇ ರೀತಿಯ ಸಾರ್ವಜನಿಕ ಭಾಗವಹಿಸುವಿಕೆಯ ಪ್ರಯತ್ನ ಕಂಡುಬಂದಿದೆ. ಆಡಳಿತದ ಸಹಯೋಗದೊಂದಿಗೆ, 'ಅನಂತ ನೀರು ಸಂರಕ್ಷಣಂ ಯೋಜನೆ"ಯನ್ನು ಪ್ರಾರಂಭಿಸಲಾಯಿತು. ಈ ಪ್ರಯತ್ನದಡಿಯಲ್ಲಿ, ೧೦ ಕ್ಕೂ ಹೆಚ್ಚು ಜಲಮೂಲಗಳನ್ನು ಪುನರುಜ್ಜೀವನಗೊಳಿಸಲಾಗಿದೆ. ಆ ಜಲಾಶಯಗಳಲ್ಲಿ ಈಗ ನೀರು ಭರ್ತಿಯಾಗುತ್ತಿದೆ. ಜೊತೆಗೆ, ೭ ಸಾವಿರಕ್ಕೂ ಹೆಚ್ಚು ಮರಗಳನ್ನು ಇಲ್ಲಿ ನೆಡಲಾಗಿದೆ. ಇದರರ್ಥ ಅನಂತಪುರದಲ್ಲಿ ನೀರಿನ ಸಂರಕ್ಷಣೆ ಜೊತೆ ಜೊತೆಗೆ ವೃಕ್ಷಾರೋಪಣ ಕೂಡಾ ವೃದ್ಧಿಸಿದೆ. ಅದು ಅಜಮ್ಗಢ ಆಗಿರಲಿ, ಅಥವಾ ಅನಂತಪುರ್ ಇಲ್ಲವೆ ದೇಶದ ಬೇರಾವುದೇ ಪ್ರದೇಶವಾಗಿರಲಿ, ಜನರು ಒಗ್ಗೂಡಿ ಕರ್ತವ್ಯ ಪ್ರಜ್ಞೆಯೊಂದಿಗೆ ದೊಡ್ಡ ಸಾಧನೆಗೈಯ್ಯುವುದನ್ನು ನೋಡುವುದು ಸಂತಸದ ಸಂಗತಿಯಾಗಿದೆ. ಸಾರ್ವಜನಿಕ ಭಾಗವಹಿಸುವಿಕೆ ಮತ್ತು ಸಾಮೂಹಿಕತೆಯ ಈ ಮನೋಭಾವವೇ ನಮ್ಮ ರಾಷ್ಟ್ರದ ದೊಡ್ಡ ಶಕ್ತಿಯಾಗಿದೆ ಎಂದು ಮನದ ಮಾತಿನಲ್ಲಿ ತಿಳಿಸಿದ್ದಾರೆ. ಇದೇ ವೇಳೆ ಪ್ರಧಾನಿ, ಯುವ ಪೀಳಿಗೆ ಆಧ್ಯಾತ್ಮದ ಬಗ್ಗೆ ಒಲವು ಬೆಳಸಿಕೊಳ್ಳುವಂತೆ ಕಿವಿ ಮಾತು ಹೇಳಿದ್ದಾರೆ. ಇಂದು ನಮ್ಮ ಸಂಸ್ಕೃತಿ ಮತ್ತು ಹಬ್ಬಗಳು ಪ್ರಪಂಚದಾದ್ಯಂತ ತಮ್ಮದೇ ಛಾಪನ್ನು ಮೂಡಿಸುತ್ತಿವೆ. ಪ್ರಪಂಚದ ಮೂಲೆ ಮೂಲೆಯಲ್ಲಿಯೂ ಭಾರತೀಯ ಹಬ್ಬಗಳನ್ನು ಅತ್ಯಂತ ಉತ್ಸಾಹ ಮತ್ತು ಸಂತೋಷದಿಂದ ಆಚರಿಸಲಾಗುತ್ತದೆ. ಸಾಂಸ್ಕೃತಿಕ ಚೈತನ್ಯವನ್ನು ಕಾಪಾಡಿಕೊಳ್ಳುವಲ್ಲಿ ನಮ್ಮ ಭಾರತೀಯ ಸಹೋದರ ಸಹೋದರಿಯರ ಪಾತ್ರ ಮಹತ್ವದ್ದಾಗಿದೆ ಎಂದು ತಿಳಿಸಿದರು. ಭಾರತದ ಕೌಟುಂಬಿಕ ವ್ಯವಸ್ಥೆ, ನಮ್ಮ ಸಂಪ್ರದಾಯದ ಅವಿಭಾಜ್ಯ ಅಂಗವಾಗಿದೆ. ವಿಶ್ವದ ಅನೇಕ ದೇಶಗಳಲ್ಲಿ ಇದನ್ನು ಬಹಳ ಕುತೂಹಲದಿಂದ

ನೋಡಲಾಗುತ್ತದೆ ಎಂದರು. ತ್ಯಾಜ್ಯ ನಿರ್ಮೂಲನೆಯ ಬಗ್ಗೆ ಪುನರುಚ್ಚರಿಸಿರುವ ಪ್ರಧಾನಿ ನರೇಂದ್ರ ಮೋದಿ, ಹಲವು ಉದಾಹರಣೆಗಳನ್ನು ನೀಡಿದ್ದಾರೆ. ಬೆಂಗಳೂರಿನಲ್ಲಿ ಸೋಫಾ ತ್ಯಾಜ್ಯವು ಒಂದು ದೊಡ್ಡ ಸಮಸ್ಯೆಯಾಗಿ ಹೊರಹೊಮ್ಮಿದ್ದು, ಕೆಲವು ವೃತ್ತಿಪರರು ಒಗ್ಗೂಡಿ ಈ ಸಮಸ್ಯೆಯನ್ನು ತಮ್ಮದೇ ಆದ ರೀತಿಯಲ್ಲಿ ಪರಿಹರಿಸುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಸಿರಿಧಾನ್ಯಗಳು ಅನ್ನದಾತರ ವರಮಾನ ಹೆಚ್ಚಳ ಮಾಡುತ್ತಿರುವುದರ ಜೊತೆಗೆ ಜನರ ಆರೋಗ್ಯದಲ್ಲಿ ಕೂಡಾ ಸುಧಾರಣೆಯ ಭರವಸೆಯಾಗುತ್ತಾ ಬಂದಿದೆ. ಸಿರಿಧಾನ್ಯಗಳಲ್ಲಿ ಪೋಷಕಾಂಶಗಳು ಸಮೃದ್ಧವಾಗಿರುತ್ತವೆ. ಇವು ಅತ್ಯುತ್ತಮ ಆಹಾರವಾಗಿವೆ ಎಂದು ಪ್ರಧಾನಿ ೧೩೦ನೇ ಆವೃತ್ತಿಯ ಮನ್ ಕಿ ಬಾತ್ ಕಾರ್ಯಕ್ರಮದಲ್ಲಿ ತಿಳಿಸಿದ್ದಾರೆ.

<><><><>

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ೭೭ನೇ ಗಣರಾಜ್ಯೋತ್ಸವದ ಮುನ್ನಾದಿನವಾದ ಇಂದು ರಾಷ್ಟ್ರವನ್ನುದ್ದೇಶಿಸಿ ಭಾಷಣ ಮಾಡಲಿದ್ದಾರೆ. ಭಾಷಣವನ್ನು ಸಂಜೆ ೭ ಗಂಟೆಯಿಂದ ಆಕಾಶವಾಣಿಯ ಸಂಪೂರ್ಣ ರಾಷ್ಟ್ರೀಯ ಜಾಲದಲ್ಲಿ ಪ್ರಸಾರ ಮಾಡಲಾಗುತ್ತದೆ. ದೂರದರ್ಶನದ ಎಲ್ಲಾ ಚಾನೆಲ್ ಗಳಲ್ಲಿ ಹಿಂದಿ ಭಾಷೆಯಲ್ಲಿ ಪ್ರಸಾರವಾದ ನಂತರ ಇಂಗ್ಲಿಷ್ ಆವೃತ್ತಿಯಲ್ಲಿ ಪ್ರಸಾರವಾಗಲಿದೆ. ಬಳಿಕ ದೂರದರ್ಶನದ ಪ್ರಾದೇಶಿಕ ಭಾಷೆಗಳಲ್ಲಿ ಪ್ರಸಾರವಾಗುತ್ತದೆ. ಆಕಾಶವಾಣಿ ತನ್ನ ಪ್ರಾದೇಶಿಕ ನೆಟ್ ವರ್ಕ್ ಗಳಲ್ಲಿ ರಾತ್ರಿ ೯.೩೦ ರಿಂದ ಪ್ರಾದೇಶಿಕ ಭಾಷಾ ಆವೃತ್ತಿಗಳನ್ನು ಪ್ರಸಾರ ಮಾಡಲಿದೆ.

<><><><>

ಮತದಾನವು ಕೇವಲ ರಾಜಕೀಯ ಅಭಿವ್ಯಕ್ತಿಯಲ್ಲ, ಬದಲಾಗಿ ದೇಶದ ಪ್ರಜಾಪ್ರಭುತ್ವ ಚುನಾವಣಾ ಪ್ರಕ್ರಿಯೆಯಲ್ಲಿ ನಾಗರಿಕರ ನಂಬಿಕೆಯ ಪ್ರತಿಬಿಂಬವಾಗಿದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದ್ದಾರೆ. ನವದೆಹಲಿಯಲ್ಲಿ ನಡೆದ ರಾಷ್ಟ್ರೀಯ ಮತದಾರರ ದಿನಾಚರಣೆ ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದ ರಾಷ್ಟ್ರಪತಿಗಳು, ಮತದಾನವು ನಾಗರಿಕರು ತಮ್ಮ ಆಕಾಂಕ್ಷೆಗಳನ್ನು ವ್ಯಕ್ತಪಡಿಸುವ ಮಾಧ್ಯಮವಾಗಿಯೂ ಕಾರ್ಯನಿರ್ವಹಿಸುತ್ತದೆ ಎಂದು ಹೇಳಿದರು. ಇಂದಿನ ಮತದಾರರು ಭವಿಷ್ಯದ ಶಿಲ್ಪಿಗಳು ಎಂದ ರಾಷ್ಟ್ರಪತಿ ಎಲ್ಲಾ ವಯಸ್ಕ ನಾಗರಿಕರು ತಮ್ಮ ಸಾಂವಿಧಾನಿಕ ಕರ್ತವ್ಯಗಳನ್ನು ಗಮನದಲ್ಲಿಟ್ಟುಕೊಂಡು ತಮ್ಮ ಮತದಾನದ ಹಕ್ಕನ್ನು ಚಲಾಯಿಸುವುದು ಮುಖ್ಯ ಎಂದು ಒತ್ತಿ ಹೇಳಿದರು. 'ನನ್ನ ಭಾರತ, ನನ್ನ ಮತ' ಎಂಬುದು ಈ ಬಾರಿಯ ಮತದಾರ ದಿನದ ಧ್ಯೇಯವಾಕ್ಯವಾಗಿದೆ. ಕಾರ್ಯಕ್ರಮದಲ್ಲಿ ರಾಷ್ಟ್ರಪತಿಗಳು ಹೊಸದಾಗಿ ಸೇರ್ಪಡೆಗೊಂಡ ಯುವ ಮತದಾರರಿಗೆ ಮತದಾರರ ಫೋಟೋ ಗುರುತಿನ ಚೀಟಿಗಳನ್ನು ಹಸ್ತಾಂತರಿಸಿದರು. ತಂತ್ರಜ್ಞಾನದ ಪರಿಣಾಮಕಾರಿ ಬಳಕೆ, ಚುನಾವಣಾ ನಿರ್ವಹಣೆ ಮತ್ತು ಸರಕು,

ನವೀನ ಮತದಾರರ ಅರಿವು, ಮತ್ತು ಮಾದರಿ ನೀತಿ ಸಂಹಿತೆಯ ಅನುಷ್ಠಾನ ಮತ್ತು ಜಾರಿ ಸೇರಿದಂತೆ ವಿವಿಧ ವಿಭಾಗಗಳಲ್ಲಿ ಅತ್ಯುತ್ತಮ ಚುನಾವಣಾ ಅಭ್ಯಾಸ ಪ್ರಶಸ್ತಿಗಳನ್ನು ರಾಷ್ಟ್ರಪತಿ ಪ್ರದಾನ ಮಾಡಿದರು. ಮಾದರಿ ನೀತಿ ಸಂಹಿತೆ ಅನುಷ್ಠಾನ ಮತ್ತು ಜಾರಿ ಪ್ರಶಸ್ತಿಯನ್ನು ಮಿಜೋರಾಂನ ಮಾಮಿತ್ ಮತ್ತು ಬಿಹಾರದ ಸಮಸ್ತಿಪುರಕ್ಕೆ ನೀಡಲಾಯಿತು. ಬಿಹಾರದ ಮಧುಬನಿ, ಉತ್ತರ ಪ್ರದೇಶದ ಬಿಜ್ನೋರ್ ಮತ್ತು ಜಾರ್ಖಂಡ್‌ನ ಪಾಕೂರ್ ತರಬೇತಿ ಮತ್ತು ಸಾಮರ್ಥ್ಯ ವೃದ್ಧಿ ವಿಭಾಗದಲ್ಲಿ ಪ್ರಶಸ್ತಿಗಳನ್ನು ಪಡೆದಿವೆ. ಮುದ್ರಣ ವಿಭಾಗದ ಮಾಧ್ಯಮ ಪ್ರಶಸ್ತಿಗಳ ವಿಭಾಗದಲ್ಲಿ, ದೈನಿಕ್ ಜಾಗರಣ್, ಪಾಟ್ನಾ, ಎಲೆಕ್ಟ್ರಾನಿಕ್ ರೇಡಿಯೋನಲ್ಲಿ ದೆಹಲಿ ಆಕಾಶವಾಣಿಯ ಸುದ್ದಿ ಸೇವಾ ವಿಭಾಗ, ಎಲೆಕ್ಟ್ರಾನಿಕ್ ಟಿವಿ ಮಾಧ್ಯಮದಲ್ಲಿ ನ್ಯೂಸ್ ೧೮- ಬಿಹಾರ-ಜಾರ್ಖಂಡ್‌ಗಳಿಗೆ ಪ್ರಶಸ್ತಿಗಳು ಸಂದಿವೆ. ೨೦೨೫ ರ ಮತದಾರರ ಶಿಕ್ಷಣ ಜಾಗೃತಿ ಕುರಿತ ಅತ್ಯುತ್ತಮ ಅಭಿಯಾನಕ್ಕಾಗಿ ಆಕಾಶವಾಣಿಯ ಸುದ್ದಿ ಸೇವಾ ವಿಭಾಗವು ಎಲೆಕ್ಟ್ರಾನಿಕ್ ರೇಡಿಯೋ ವಿಭಾಗದಲ್ಲಿ ಮಾಧ್ಯಮ ಪ್ರಶಸ್ತಿಯನ್ನು ಪಡೆದುಕೊಂಡಿದೆ. ಆಕಾಶವಾಣಿಯ ಮಹಾನಿರ್ದೇಶಕ ರಾಜೀವ್ ಕುಮಾರ್ ಜೈನ್, ರಾಷ್ಟ್ರಪತಿಯವರಿಂದ ಪ್ರಶಸ್ತಿಯನ್ನು ಪಡೆದರು. ಚುನಾವಣಾ ಭಾಗವಹಿಸುವಿಕೆ ಮತ್ತು ಸುಲಭವಾಗಿ ಚುನಾವಣೆಗಳ ಬಗ್ಗೆ ಜಾಗೃತಿ ಮೂಡಿಸುವಲ್ಲಿ ಆಕಾಶವಾಣಿಯ ಕೊಡುಗೆಯನ್ನು ಈ ಪ್ರಶಸ್ತಿ ಗುರುತಿಸುತ್ತದೆ.

<><><><>

೨೦೨೬ ರ ಗಣರಾಜ್ಯೋತ್ಸವದ ಸಂದರ್ಭದಲ್ಲಿ, ಪೊಲೀಸ್, ಅಗ್ನಿಶಾಮಕ, ಗೃಹರಕ್ಷಕ ದಳ ಮತ್ತು ನಾಗರಿಕ ರಕ್ಷಣಾ ಮತ್ತು ಸುಧಾರಣಾ ಸೇವೆಗಳ ೯೮೨ ಸಿಬ್ಬಂದಿಗೆ ಶೌರ್ಯ ಮತ್ತು ಸೇವಾ ಪದಕಗಳನ್ನು ನೀಡಲಾಗಿದೆ. ಈ ಪೈಕಿ ೧೨೫ ಸಿಬ್ಬಂದಿಗೆ ಶೌರ್ಯಕ್ಕಾಗಿ ಪದಕ ನೀಡಲಾಗಿದೆ. ಜೀವ, ಆಸ್ತಿಯನ್ನು ಉಳಿಸುವಲ್ಲಿ, ಅಪರಾಧವನ್ನು ತಡೆಗಟ್ಟುವಲ್ಲಿ ಅಥವಾ ಅಪರಾಧಿಗಳನ್ನು ಬಂಧಿಸುವಲ್ಲಿ ನೀಡಿದ ಕೊಡುಗೆಗಾಗಿ ಈ ಪ್ರಶಸ್ತಿ ನೀಡಲಾಗುತ್ತದೆ. ಇದಲ್ಲದೆ, ೧೦೧ ಪ್ರತಿಷ್ಠಿತ ಸಿಬ್ಬಂದಿ ವಿಶಿಷ್ಟ ಸೇವೆಗಾಗಿ ರಾಷ್ಟ್ರಪತಿ ಅವರ ಪದಕ ಮತ್ತು ೭೫೬ ಸಿಬ್ಬಂದಿ ಶ್ಲಾಘನೀಯ ಸೇವೆಗಾಗಿ ಪದಕಗಳನ್ನು ಪಡೆದಿದ್ದಾರೆ. ವಿಶಿಷ್ಟ ಸೇವೆಗಾಗಿ ರಾಷ್ಟ್ರಪತಿ ಅವರ ಪದಕವನ್ನು ಸೇವೆಯಲ್ಲಿನ ವಿಶೇಷ ದಾಖಲೆಗಾಗಿ ನೀಡಲಾಗುತ್ತದೆ ಮತ್ತು ಶ್ಲಾಘನೀಯ ಸೇವೆಗಾಗಿ ಪದಕವನ್ನು ಸಂಪನ್ಮೂಲ ಮತ್ತು ಕರ್ತವ್ಯದ ಶ್ರದ್ಧೆಯಿಂದ ನಿರೂಪಿಸಲ್ಪಟ್ಟ ಅಮೂಲ್ಯ ಸೇವೆಗಾಗಿ ನೀಡಲಾಗುತ್ತದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>